ದಿನಾಂಕ 06–02–2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ಶ್ರೀ ಎಸ್.ಬಿ.ಆರ್. 6 ನೇ ಪ್ರತಿವಾದಿ ಪರ ವಕೀಲರಿಂದ:**

ನಾನು ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿದೆ ಎಂದರೆ ಸರಿ . 2 ನೇ ಪ್ರತಿವಾದಿಯ ತಂದೆಯ ಹೆಸರು ಹೆಚ್. ಎಂ. ಮುನಿಯಪ್ಪ ಅವರು ನಮ್ಮ ಸಂಬಂಧಿಕರೇನಲ್ಲ, ನಮ್ಮ ಗ್ರಾಮದವರು ಎಂದು ನುಡಿಯುತ್ತಾರೆ. ಮುನಿಯಪ್ಪರವರು ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಯ ತಂದೆಂದುವರು ಕಷ್ಟ ಎಂದು ಬಂದ ಜನರಿಗೆ ಸಾಲವನ್ನು ಕೊಡುತ್ತಿದ್ದರು ಎಂದರೆ ಸಾಕ್ಷಿಯು ಹಾಗೇನು ಇಲ್ಲ,ನನ್ನ ಗ ಮನಕ್ಕೆ ಇಲ್ಲ ಎಂದು ನುಡಿಯುತ್ತಾರೆ.

ಈ ದಾವೆಯನ್ನು ಯಾರು ಹಾಕಿದ್ದಾರೆ ಎಂದರೆ ಸಾಕ್ಷಿಯೂ ಪಿಳ್ಳೇ ನಾರಾಯಣಪ್ಪನ ಹೆಣ್ಣು ಮಕ್ಕಳು, ಮೊಮ್ಮಕ್ಕಳು ಹಾಕಿದ್ದಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ವಾದಿಯರು ಆಸ್ತಿಯಲ್ಲಿ ಭಾಗ ಕೇಳಿ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ವಿಷಯವನ್ನು ನನಗೆ ಜನರು ತಿಳಿಸಿರುತ್ತಾರೆ. ಯಾವ ವರ್ಷದಲ್ಲಿ ಚನ್ನಪ್ಪನಿಂದ ಮುನಿಯಪ್ಪನವರು ಜಮೀನನ್ನು ಖರೀದಿಸಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನಿಖರವಾದ ದಿನಾಂಕ , ವರ್ಷ ನೆನಪಿಲ್ಲ. ಚನ್ನಪ್ಪನಿಂದ ಮುನಿಯುಪ್ಪರವರು ಆಸ್ತಿಯನ್ನು ಖರೀದಿ ಮಾಡಿದ್ದರ ಬಗ್ಗೆ ನನಗೆ ಗೊತ್ತಿದೆ ಆದರೆ ನಾನು ಖರೀದಿ ಪತ್ರವನ್ನು ನೋಡಿಲ್ಲ ಆಸ್ತಿಯನ್ನು ಖರೀದಿ ಮಾಡುವಾಗ ನಾನು ಹಾಜರಿರಲಿಲ್ಲ ಎಂದರೆ ಸರಿ . ಆ ಖರೀದಿ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿಲ್ಲ ಎಂದರೆ ಸರಿ . ಖರೀದಿ ಮಾಡಿದ ಆಸ್ತಿಯ ಸರ್ವೆ ನಂ. 1 ಮತ್ತು ಅದು ಮಡಬಹಳ್ಳಿ ಗ್ರಾಮದಲ್ಲಿ ಇದೆ ಎಂದು ನುಡಿಯುತ್ತಾರೆ.

ಚನ್ನಪ್ಪರವರಿಂದ ಮುನಿಯಪ್ಪರವರು ಆಸ್ತಿಯನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯೂ ಮುಂದುವರಿದು ಖರೀದಿ ಮಾಡಿದ್ದರ ಬಗ್ಗೆ ನನಗೆ ಮಾಹಿತಿ ಇದೆ ಎಂದು ನುಡಿಯುತ್ತಾರೆ.

ಚನ್ನಪ್ಪರವರಿಂದ ಮುನಿಯಪ್ಪರವರು ಆಸ್ತಿಯನ್ನು ಖರೀದಿ ಮಾಡದೇ ಇದ್ದರೂ ಸಹ 1 ರಿಂದ 5 ನೇ ಪ್ರತಿವಾದಿಯರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚನ್ನಪ್ಪರವರ ಅಮ್ಮನವರಾದ ದಾಸಮ್ಮನವರ ಕಡೆಯಿಂದ ಅವರು ಪಡೆದಿದ್ದವರಿಂದ 6,500 ಸಾಲದ ಭದ್ರತೆಗಾಗಿ ದಿನಾಂಕ 03.06.1991 ರಂದು ನಾಮಾಕಾವಸ್ಥೆಗಾಗಿ ಕ್ರಯಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ಮುನಿಯಪ್ಪರವರು ದಾಸಮ್ಮನವರಿಗೆ ಎದುರಡಿ ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ.

ಈ ಆಸ್ತಿಗೆ ಸಂಬಂಧವಾಗಿ ದಾಸಮ್ಮನವರು ಚನ್ನಮ್ಮರವರ ವಿರುದ್ಧವಾಗಿ ಒಂದು ದಾವೆಯನ್ನು ಹೂಡಿದ್ದಾರೆ ಎಂದರೆ ಸಾಕ್ಷಿಯು ದಾವೆ ಚಾಲ್ತಿಯಲ್ಲಿ ಇದೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲನ್ನು ವಕೀಲರ ತಕರಾರಿಗೆ ಒಳಪಟ್ಟು ಮುಂದೂಡಲಾಯಿತು.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸ ಇದೆ.**

**(ಶ್ರೀಮತಿ. ರೂಪಾ.ಸಿ. ವಗ್ಗಾ)**
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.